# ದಕ್ಷಿಣ ಏಷ್ಯಾದಲ್ಲಿ ಕೃಷಿ ಸಂಶೋಧನೆಯ ಪ್ರಜಾ ತಾಂತ್ರೀಕರಣ – 'ಆದರ್ಶ'

## Alliance for Democratising Agriculutural Research in South Asia

**# 101, Kishan Residency, Street No 5, Begumpet, Hyderabad, Andhra Pradesh, India – 500 016**
**Ph: 040 27764577 Fax: 040 27764722 , Email:** ddshyderabad@gmail.com, hyd2_ddsppvr1@sancharnet.in
Website : www.raitateerpu.com



***Organising Committee***

**P V Satheesh**
*Director*
*Deccan Development Society*
**Hyderabad**
**Ph: 08451 282271**

**Dr P Babu**
*Director,*
*ICRA*
**Bangalore**
**Ph: 080 25283370**

**Mr Pandurang Hegde**
*APPIKO*
**Sirsi**
**Ph: 08384 225139**

**Ms Anitha Pailoor**
*Centre for Agricultural Media*
**Dharwad**
**Ph: 0836 2444736**


ಪತ್ರಿಕಾ ಪ್ರಕಟಣೆ 5.12.2009

ಹಸಿರು ಕ್ರಾಂತಿಯ ನಂತರದ ಕೆಲವು ಬೆಳವಣಿಗೆಗಳಿಂದಾಗಿ ಕೃಷಿ ರೈತರ ಮಡಿಲಿಂದ ಮಾರುಕಟ್ಟೆಯ ತೆಕ್ಕೆಗೆ ದೂಡಲ್ಪಟ್ಟಿತು. ಆಹಾರ ಧಾನ್ಯಗಳಿಂದ ವಾಣಿಜ್ಯ ಬೆಳೆಗಳಿಗೆ ಮುಖ ಮಾಡಿದ ಕೃಷಿಕರು ಮಿಶ್ರ ಬೆಳೆ ಪದ್ಧತಿಯನ್ನು ಮರೆಯಬೇಕಾಯಿತು. ಸಾರ್ವಜನಿಕ ಆಹಾರ ವ್ಯವಸ್ಥೆ(ಪಿ.ಡಿ.ಎಸ್)ಯ ಮೂಲಕ ಅಕ್ಕಿ, ಗೋಧಿ, ಸಕ್ಕರೆಗಳನ್ನು ಸರಕಾರ ರೈತರಿಗೆ ವಿತರಿಸತೊಡಗಿತು. ಸಹಜವಾಗಿ ಸ್ಥಳೀಯ ಆಹಾರ ವೈವಿಧ್ಯ ನೇಪಥ್ಯಕ್ಕೆ ಸರಿಯಿತು. ತಮ್ಮ ಆಹಾರವನ್ನು ತಾವೇ ಬೆಳೆಯುತ್ತಿದ್ದ, ಆ ಮೂಲಕ ಆರೋಗ್ಯವನ್ನು ಕಾಪಾಡಿಕೊಂಡಿದ್ದ ಕೃಷಿಕರು ಮಾರುಕಟ್ಟೆಗಾಗಿ, ಉದ್ಯಮದ ಅನುಕೂಲಕ್ಕಾಗಿ ಕೃಷಿ ಮಾಡಲಾರಂಭಿಸಿದರು.

ಇಂದು ಕೃಷಿಕರಿಗೆ ಸುಸ್ಥಿರ ಬದುಕನ್ನು ನೀಡುವ ನಿಟ್ಟಿನಲ್ಲಿ ಅನೇಕ ಸ್ಥರಗಳಲ್ಲಿ ಸಂಶೋಧನೆಗಳಾಗುತ್ತಿವೆ. ಆದರೆ ಅವರ ಅನ್ನದ ಬಟ್ಟಲು ಇನ್ನೂ ಬರಿದಾಗೇ ಇದೆ. ಪೌಷ್ಟಿಕ ಆಹಾರ ಬೆಳೆಯುವವರು ಇಂದು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ಕೃಷಿರಂಗದಲ್ಲಿ ಇಷ್ಟು ಬೆಳವಣಿಗೆಗಳಾಗುತ್ತಿದ್ದರೂ, ಅದು ರೈತರನ್ನು ಯಾಕೆ ತಲುಪುತ್ತಿಲ್ಲ?

ಈ ಹಿನ್ನೆಲೆಯಲ್ಲಿ ಕೃಷಿ ಸಂಶೋಧನೆಯಲ್ಲಿ ಕೃಷಿಕ ಪಾಲ್ಗೊಳ್ಳುವಿಕೆಯ ಆಶಯವನ್ನಿಟ್ಟುಕೊಂಡು ನಡೆದ ರೈತತೀರ್ಪು ಕಾರ್ಯಕ್ರಮ ಬೆಂಗಳೂರು ಸಮೀಪದ ಫೈರ್‌ಫ್ಲೈಸ್ ಆಶ್ರಮದಲ್ಲಿ ಆಯೋಜಿಸಿದ ರೈತ ತೀರ್ಪು ಕಾರ್ಯಕ್ರಮದಲ್ಲಿ ರೈತ ನ್ಯಾಯಮಂಡಳಿಯ ಸದಸ್ಯರಾಗಿ ಭಾಗವಹಿಸಿ ಮಾತನಾಡುತ್ತಿದ್ದರು. ದಲಿತರು, ಬುಡಕಟ್ಟು ಜನಾಂಗದವರು, ದನಿವಂಚಿತರು ಹೀಗೆ ವಿವಿಧ ವರ್ಗಗಳ ರೈತರು ರಾಜ್ಯದ ಎಲ್ಲಾ ಕೃಷಿ ಪ್ರದೇಶಗಳನ್ನು ಪ್ರತಿನಿಧಿಸಿದ್ದರು. ಸಣ್ಣರೈತರೇ ಹೆಚ್ಚಾಗಿದ್ದ 28 ಮಂದಿ ಸದಸ್ಯರಿದ್ದ ನ್ಯಾಯಮಂಡಳಿಯಲ್ಲಿ 14 ಮಂದಿ ಪುರುಷರು.

ಕೃಷಿ ಸಂಶೋಧನೆ ಹೆಚ್ಚು ಪ್ರಜಾತಾಂತ್ರಿಕರಣಗೊಳ್ಳಲು, ರೈತ ಸಂಶೋಧನೆಯಲ್ಲಿ ತೊಡಗಿಕೊಳ್ಳುವಂತೆ ಮಾಡಲು ಇರಬಹುದಾದ ಅಡ್ಡಿ-ಆತಂಕಗಳ ಬಗ್ಗೆ ನ್ಯಾಯಮಂಡಳಿಯು ಕೃಷಿ ಸಂಶೋಧನೆ ಮತ್ತು ಸಂಬಂಧಿಸಿದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಪರಿಣಿತರಿಂದ ಮಾಹಿತಿ ಪಡೆಯಿತು. ತಮ್ಮ ಅನುಭವದ ಆಧಾರದ ಮೇಲೆ ವಿಷಯ ಪರಿಣತರನ್ನು ಪ್ರಶ್ನೆ ಮಾಡುವ ನ್ಯಾಯಮಂಡಳಿಗೆ ಪರಿಣತಿಯ ವಿಚಾರಗಳನ್ನು ಮನವರಿಕೆ ಮಾಡಿಕೊಡಲು ತಮ್ಮೆಲ್ಲ ಸಾಮರ್ಥ್ಯಗಳನ್ನು ಬಳಸಬೇಕಾಗಿದೆ.

ಮೂರು ದಿನಗಳ ಕಾಲ ನಡೆದ ಕಾರ್ಯಕ್ರಮದಲ್ಲಿ 12 ಜನ ವಿಷಯ ಪರಿಣತರ ವಿಷಯ ಮಂಡನೆಯನ್ನು ಆಲಿಸಿದ ನ್ಯಾಯ ಮಂಡಳಿ ಗಂಭೀರ ಚರ್ಚೆಯಲ್ಲಿ ತೊಡಗಿದೆ. ಕೃಷಿ ವಿಶ್ವವಿದ್ಯಾಲಯದ ಪ್ರತಿನಿಧಿಗಳು, ಖಾಸಗಿ ಬೀಜ ಕಂಪನಿಯ ಪ್ರತಿನಿಧಿ ಹಾಗೂ ಸ್ವಯಂಸೇವಾ ಸಂಸ್ಥೆಗಳು ಹಾಗೂ ನಾಗರಿಕ ಸಮಾಜದ ಪ್ರತಿನಿಧಿಗಳು, ರೈತಸಂಘಟನೆಗಳ ಪ್ರತಿನಿಧಿಗಳು ಹಾಗೂ ಗ್ರಾಹಕ ಚಳವಳಿಯ ಮುಖಂಡರು ಕಾರ್ಯಕ್ರಮದಲ್ಲಿ ತಮ್ಮ ವಿಷಯವನ್ನು ಮಂಡಿಸಿದರು. ಡಿಸೆಂಬರ್ 5ರಂದು ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆ (ಐಎಟಿ)ಯಲ್ಲಿ ನಡೆಯಲಿರುವ ಸಾರ್ವಜನಿಕ ಸಮಾರಂಭದಲ್ಲಿ ರೈತ ನ್ಯಾಯಮಂಡಳಿ ಸದಸ್ಯರು ತೀರ್ಪು ನೀಡಲಿದ್ದಾರೆ.

ರೈತತೀರ್ಪು ಕಾರ್ಯಕ್ರಮ ಪಾರದರ್ಶಕವಾಗಿ ನಡೆಯುತ್ತಿದ್ದು ಪಕ್ಷಾತೀತವಾಗಿದೆ ಎಂಬುದನ್ನು ದೃಢಪಡಿಸಿಕೊಳ್ಳಲು ಜಸ್ಟಿಸ್ ಎಮ್.ಎನ್. ವೆಂಕಟಾಚಲಯ್ಯ ಅವರ ನೇತೃತ್ವದಲ್ಲಿ ಮೇಲ್ವಿಚಾರಣಾ ಸಮಿತಿ ಮಾರ್ಗದರ್ಶನ ನೀಡುತ್ತಿದೆ. ಈ ಸಮಿತಿಯಲ್ಲಿ ಡಾ. ಸುದರ್ಶನ್, ಡಾ. ದ್ವಾರಕಿನಾಥ್, ಹೇಮಲತಾ ಮಹಿಷಿ, ಡಾ. ಗೋಪಾಲ ಕಡೆಕೋಡಿ, ಬಿ.ಟಿ. ಲಲಿತಾ ನಾಯಕ್ ಹಾಗೂ ಡಾ. ಎಲ್. ಹನುಮಂತಯ್ಯ ಇದ್ದಾರೆ. ದಕ್ಷಿಣ ಏಷ್ಯಾದಲ್ಲಿ ಕೃಷಿ ಸಂಶೋಧನೆಯ ಪ್ರಜಾತಾಂತ್ರೀಕರಣಕ್ಕಾಗಿ ರೂಪುಗೊಂಡಿರುವ 'ಆದರ್ಶ' ಒಕ್ಕೂಟ ಈ ಕಾರ್ಯಕ್ರಮವನ್ನು ಏರ್ಪಡಿಸಿದೆ.

ಈ ಸಂಬಂಧ ಪ್ರಕ್ರಿಯೆಗಳು ಕಳೆದ ಆರು ತಿಂಗಳಿಂದ ನಡೆಯುತ್ತಿವೆ. ರಾಜ್ಯದ ಕೃಷಿ ಸಂಘಟಣೆಗಳು, ವಿಜ್ಞಾನಿಗಳು, ಗ್ರಾಹಕ ಸಂಘಟನೆಗಳು, ನಾಗರಿಕ ಸಮಾಜ ಸಂಘಟನೆಗಳ ಪ್ರತಿನಿಧಿಗಳು ಈ ಪ್ರಕ್ರಿಯೆಯನ್ನು ಮುನ್ನಡೆಸುತ್ತಿದ್ದು 18 ಸದಸ್ಯರನ್ನೊಳಗೊಂಡ ಸಂಚಾಲನಾ ಸಮಿತಿಯ ರಚನೆಯಾಗಿದೆ. ಹೈದರಾಬಾದಿನ ಡೆಕ್ಕನ್ ಡೆವೆಲಪ್‌ಮೆಂಟ್ ಸೊಸೈಟಿ(ಡಿ.ಡಿ.ಎಸ್)ಯ ಪಿ.ವಿ ಸತೀಶ್ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮವನ್ನು ಕರ್ನಾಟಕದಲ್ಲಿ 'ಇನ್ಸ್ಟಿಟ್ಯೂಟ್ ಫಾರ್ ಕಲ್ಚರಲ್ ರಿಸರ್ಚ್ ಅಂಡ್ ಆ್ಯಕ್ಷನ್(ಇಕ್ರಾ)', ಬೆಂಗಳೂರು; 'ಅಪ್ಪಿಕೋ ಚಳವಳಿ', ಸಿರಸಿ; 'ಹಿತ್ತಿಲಗಿಡ', ಬೆಂಗಳೂರು ಹಾಗೂ 'ಕೃಷಿ ಮಾಧ್ಯಮ ಕೇಂದ್ರ', ಧಾರವಾಡ ಒಟ್ಟಾಗಿ ಸಂಯೋಜನೆ ಮಾಡುತ್ತಿವೆ.

ರೈತರ ಅನುಭವ, ಅವರಲ್ಲಿರುವ ವಿಶೇಷ ಜ್ಞಾನ, ಅವರ ಅನುಶೋಧನೆಗಳು ಮುಂಚೂಣಿಗೆ ಬರಬೇಕು; ಕೃಷಿ ಸಂಶೋಧನಾ ವ್ಯವಸ್ಥೆ ಹೆಚ್ಚು ಪಾರದರ್ಶಕವಾಗಿರಬೇಕು; ದನಿವಂಚಿತರ, ಸಣ್ಣ ಹಾಗೂ ಮಧ್ಯಮ ರೈತರ ಅಗತ್ಯ ಹಾಗೂ ಆಶೋತ್ತರಗಳಿಗೆ ಸಂಶೋಧನಾ ರಂಗ ಸ್ಪಂದಿಸಬೇಕು ಎಂಬ ಪ್ರತಿಪಾದನೆಯೊಂದಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಇಂಗ್ಲೆಂಡ್‌ನ ಐ.ಐ.ಇ.ಡಿ (ಅಂತಾರಾಷ್ಟ್ರೀಯ ಪರಿಸರ ಮತ್ತು ಅಭಿವೃದ್ಧಿ ಸಂಸ್ಥೆ)ಯ ನೇತೃತ್ವದಲ್ಲಿ ಏಷ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೇರಿಕಾ ಖಂಡಗಳಲ್ಲಿ ಕೃಷಿ ಸಂಶೋಧನೆಯ ಪ್ರಜಾ ತಾಂತ್ರೀಕರಣದ ಆಶಯದೊಂದಿಗೆ ಸಂಯುಕ್ತವಾಗಿ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ. ಆದರ್ಶ(Democratising Agricultural Research in South Asia – ADARSA) ಇದರ ಒಂದು ಭಾಗ. ದಕ್ಷಿಣ ಏಷ್ಯಾದಲ್ಲಿ ನೇಪಾಳ, ಭಾರತ ಹಾಗೂ ಶ್ರೀಲಂಕಾದಲ್ಲಿ ಆದರ್ಶ ಸಕ್ರಿಯವಾಗಿದೆ. ಈ ದೇಶಗಳಲ್ಲಿ ದೇಸಿ ಮಾದರಿಯಲ್ಲಿ ರೈತತೀರ್ಪು ಕಾರ್ಯಕ್ರಮವನ್ನು ಸಂಘಟಿಸುವ ನಿಟ್ಟಿನಲ್ಲಿ ಹತ್ತಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಜಗತ್ತಿನಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ 'ರೈತತೀರ್ಪು' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

**ಪಿ.ವಿ. ಸತೀಶ್**
**ಸಂಚಾಲಕರು, ಆದರ್ಶ**